Mysore Sandal Oil Factory Staff

405. Sri K. SRIRAMULU (Gandhinagar).—

Will the Minister for Industries be pleased to state:—

(*a*) the total number of labourers in Mysore Sandal Oil Factory;

(*b*) the amount of salary paid to them per month;

(*c*) the number of clerks and officers in the factory and amount of salary paid to them per month?

Sri S. M. KRISHNA (Minister for Industries).—

	Mysore	Shimoga	Total
(*a*)	177	103	280
(*b*)	Rs. 42,633	Rs. 21,763	Rs. 64,396
(*c*)	53	33	86
	Rs. 22,706	Rs. 14,096	Rs. 36,802

ಶ್ರೀ ಕೆ. ಶ್ರೀರಾಮುಲು.—ಸ್ವಾಮಿ ಈ ಗಂಧದ ಎಣ್ಣೆಯ ಕಾರ್ಖಾನೆಯ ಸಿಬ್ಬಂದಿಯವರಿಗೆ ಕೊಡತಕ್ಕ ವೇತನವನ್ನು ಈ ಪ್ರಶ್ನೆಯಲ್ಲಿ ನಮೂದು ಮಾಡಿದ್ದೀರಿ, ಇದರಲ್ಲಿ ಡಿ.ಎ. ಸೇರಿಸಿದೆಯೇ ಹೇಗೆ ಎಂಬುದನ್ನು ತಿಳಿಸುತ್ತೀರಾ?

† ಶ್ರೀ ಎಸ್. ಎಂ. ಕೃಷ್ಣ.—ವೇತನದಲ್ಲಿ ಡಿ.ಎ. ಇನ್‌ಕ್ಲೂಡ್ ಆಗಿದೆ.

ಶ್ರೀ ಕೆ. ಶ್ರೀರಾಮುಲು.—ಪ್ರತಿ ಮೂರು ಜನ ಕಾರ್ಮಿಕರಿಗೂ ಒಬ್ಬರು ಸೂಪರ್‌ವೈಜರ್ ಸ್ಥಾನ ಇರುತ್ತದೆಂದು ಅರ್ಥವಾಗುತ್ತದೆ. ಇದು ಸರಿಯೇ?

ಶ್ರೀ ಎಸ್. ಎಂ. ಕೃಷ್ಣ.—ಬಹಳ ಹಿಂದೆ ಈ ಫ್ಯಾಕ್ಟರಿಗಳು ಪ್ರಾರಂಭವಾಗಿವೆ. ಆದ್ದರಿಂದ ಅಲ್ಲಿ ಶಾಸ್ತ್ರೀಯವಾಗಿ ರೆಕ್ರೂಟ್‌ಮೆಂಟ್ ನಡೆದಿದೆ ಎಂದು ನಾನು ಭಾವಿಸುವುದಿಲ್ಲ. ಆಗಿಂದಾಗ್ಗೆ ರೆಕ್ರೂಟ್‌ಮೆಂಟನ್ನು ತಮಗೆ ತಿಳಿದಹಾಗೆ ಮಾಡಿಕೊಂಡು ಬಂದಿದ್ದಾರೆ. ಇನ್ನು ಮುಂದೆ ರೆಕ್ರೂಟ್‌ಮೆಂಟ್ ಮಾಡುವಾಗ ಒಂದು ಕಾರ್ಖಾನೆಗೆ ಇಷ್ಟು ಜನ ಕಾರ್ಮಿಕರಿಗೆ ಇಷ್ಟು ಜನ ಸೂಪರ್‌ವೈಜರ್ ಇರಬೇಕು ಎಂದು ಜೇಬರ್ ಪ್ರಕಾರ ರೆಕ್ರೂಟ್‌ಮೆಂಟ್ ಮಾಡುತ್ತೇವೆ.

ಶ್ರೀ ಕೆ. ಶ್ರೀರಾಮುಲು.—ಉಳಿಯತಾಯದ ದೃಷ್ಟಿಯಿಂದ ಎರಡು ಕಾರ್ಖಾನೆಗಳು ಒಂದೇ ಕಡೆ ಇರುವುದು ಒಳ್ಳೆಯದು ಎಂದು ಭಾವಿಸುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.—ಮೈಸೂರಿನಲ್ಲಿರತಕ್ಕ ಗಂಧದ ಎಣ್ಣೆಯ ಕಾರ್ಖಾನೆಯನ್ನು ವರ್ಗಾಯಿಸುತ್ತೇವೆ ಎಂದು ಹೇಳಿದರೆ ಅವರು ಪ್ರತಿಭಟನೆ ಮಾಡುತ್ತಾರೆ, ಶಿವಮೊಗ್ಗದಲ್ಲಿರತಕ್ಕ ಕಾರ್ಖಾನೆಯನ್ನು ವರ್ಗಾಯಿಸುವುದಕ್ಕೆ ಅವರೂ ವಿರೋಧವನ್ನು ಸೂಚಿಸುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ತಾವು ಕೊಟ್ಟಿರುವ ಪಟ್ಟಿ ಪ್ರಕಾರ the ratio of salary between the workers and supervisory staff is nearly more than double. The number of workers are more and they get less than 50 per cet of the amount paid to the supervisory and clerical staff. Will the Minister try to increase the salary of workers?

Sri S. M. KRISHNA.—I am afraid the Association of Workers, both in Shimoga and Mysore, have entered into a truce agreement with the management on 1st April 1968. It has come to a close on 31st March 1972. Now the workers have put forward before the management certian fresh proposals and they are being considered by the

management. Certainly at that point of time, all these factors will be borne in mind.

ಶ್ರೀ ಕಾಗೋಡು ತಿಮ್ಮಪ್ಪ.—ಶಿವಮೊಗ್ಗದಲ್ಲಿರತಕ್ಕ ಕಾರ್ಖಾನೆ ಬಹಳ ವರ್ಷಗಳಿಂದ ಒಂದೇ ಸ್ಥಿತಿಯಲ್ಲಿದೆ. ಆದ್ದರಿಂದ ಅದನ್ನು ಸ್ವಲ್ಪ ಅಭಿವೃದ್ಧಿಪಡಿಸಿ ಹೆಚ್ಚು ಜನಗಳಿಗೆ ಉದ್ಯೋಗ ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಹೆಚ್ಚು ಜನಗಳಿಗೆ ಉದ್ಯೋಗ ಕಲ್ಪನಬೇಕು ಎಂಬುದು ನಮ್ಮ ಉದ್ದೇಶ.

ಶ್ರೀ ಸಿ. ಬೈರೇಗೌಡ.—ಅವರಿಗೆ ಮಿನಿಮಮ್ ವೇಜಸ್ ಆಕ್ಟ್ ಪ್ರಕಾರ ಸಂಬಳವನ್ನು ಕೊಡುತ್ತಿದ್ದೀರಾ ಹೇಗೆ ? ಈಗ ಅಲ್ಲಿ ಸೂಪರ್‌ವೈಜರುಗಳಿಗೆ ಮತ್ತು ಕ್ಲಾರ್ಕ್‌ಗಳಿಗೆ ಹೆಚ್ಚು ಸಂಬಳ ಮತ್ತು ಕಾರ್ಮಿಕರಿಗೆ ಕಡಿಮೆ ಸಂಬಳ ಯಾವ ಆಧಾರದ ಮೇಲೆ ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಅವರು ಕೆಲಸಕ್ಕೆ ಅರ್ಜಿಯನ್ನು ಹಾಕಿ, ಅವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಾಗ ಯಾವ ಆಧಾರದ ಮೇಲೆ ಕ್ಲಾರ್ಕ್‌ಗೆ ಇಷ್ಟು ಸಂಬಳ, ಸೂಪರ್‌ವೈಜರಿಗೆ ಇಷ್ಟು ಸಂಬಳ, ಕಾರ್ಮಿಕರಿಗೆ ಇಷ್ಟು ಸಂಬಳ ಎಂದು ನಿಗದಿ ಮಾಡಿ ರೆಕ್ರೂಟ್ ಮಾಡಿಕೊಂಡಿರುತ್ತಾರೆಯೋ ಅದನ್ನೇ ಮುಂದುವರಿಸಿಕೊಂಡು ಬರುತ್ತಾರೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ಮೈಸೂರು ಗಂಧದ ಎಣ್ಣೆಯ ಕಾರ್ಖಾನೆಯಲ್ಲಿ 177 ಜನ ಕಾರ್ಮಿಕರು, ಗುಮಾಸ್ತರು ಮತ್ತು ಅಧಿಕಾರಿಗಳು 53 ಜನ, ಶಿವಮೊಗ್ಗ ಗಂಧದ ಎಣ್ಣೆಯ ಕಾರ್ಖಾನೆಯಲ್ಲಿ 103 ಜನ ಕಾರ್ಮಿಕರು, 33 ಜನ ಗುಮಾಸ್ತರು ಮತ್ತು ಅಧಿಕಾರಿಗಳು ಇದ್ದಾರೆ. ಇದರಲ್ಲಿ ಹರಿಜನ ಗಿರಿಜನರು ಎಷ್ಟು ಜನ ಇದ್ದಾರೆ. ಒಂದು ವೇಳೆ ಅದರಲ್ಲಿ ಹರಿಜನ ಗಿರಿಜನರು ಇಲ್ಲದಿದ್ದರೆ ಇನ್ನು ಮುಂದಕ್ಕಾದರೂ ಕೂಡ ಈ ಫ್ಯಾಕ್ಟರಿಗಳಲ್ಲಿ ಹರಿಜನ ಗಿರಿಜನರಿಗೆ ಕೆಲಸಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇದುವರೆಗೆ ಅವರಿಗೆ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ, ಇನ್ನು ಮುಂದೆ ಮಾಡ್ಡತಕ್ಕ ರೆಕ್ರೂಟ್‌ಮೆಂಟಿನಲ್ಲಿ ಹರಿಜನ ಗಿರಿಜನರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಡಬೇಕು ಎನ್ನುವ ತತ್ವವನ್ನು ನಾನು ಒಪ್ಪತಕ್ಕವನು.

Rural Housing Scheme

370. **Sri B. SATHYANARAYANA SINGH** (Hospet).—

Will the Minister for Municipal Administration be pleased to state :—

(*a*) whether there is a proposal before Government to allot Rs. 50 lakhs in the current year's budget for Rural Housing Scheme ;

(*b*) whether there is any proposal before the Government to grant housing loans to the weaker sections of the society of Bellary District through Rural Housing Cell ?

Sri B. BASAVALINGAPPA (Minister for Municipal Administration).—

(*a*) A provision of Rs. 40 lakhs has been made in the State Plan Budget towards Rural Housing Scheme to be alloted to the Mysore Housing Board out of the loan to be received from the Life Insurance Corporation of India.